ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,

12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:-04-10-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ :ಬಿ12(5)/ಪಿಆರ್/35/2020-21 ದಿನಾಂಕ:21:09:2020

(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./29/2021-22 ದಿನಾಂಕ:01-10-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. |
| 6. | ಶ್ರೀ ರಾಮಚಂದ್ರ | 1ನೇ ಎನ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. |
| 7. | ಶ್ರೀ. ಸುನೀಲ್ | ಮಾಷಲ್ ವಾರ್ಡ್ ಸಂಖ್ಯೆ-67. |
| 8. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರು. |
| 9. | ಶ್ರೀ. ಸೋಮನಾಥ್ | ಸಹಾಯಕ ಅಭಿಯಂತರರು ಬೆಂ.ಜ.ಮಂ |
| 10. | ಶ್ರೀ. ಗುರುಮೂರ್ತಿ | ಘ.ತ್ಯಾ.ನಿ ವಿಭಾಗದ ಸಿಬ್ಬಂದಿ |
| 11. | ಶ್ರೀ. ಲೋಕೇಶ್ | ಪಶು ಪಾಲನಾ ವಿಭಾಗ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಅಕ್ಟೋಬರ್ ಮಾಹೆಯ ದಿ:04/10/2021 ರಂದು ಬೆಳಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಪು.ತಿ.ನೋ.



Scanned by CamScanner

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿ... ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡ... ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

| | |
|---|---|
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ 11ನೇ ಕ್ರಾಸ್ ನಾಗಪುರ ಆರ್ಚ್ ಹತ್ತಿರ ಮರಗಳ ತಂಡುಗಳು (ಮರಗಳ ಟ್ರಿಂಮಿಂಗ್ ಮಾಡಿದ ತುಂಡುಗಳು) ಬಿದ್ದಿರುತ್ತದೆ ಇದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಗುರುಮೂರ್ತಿ ಘ.ತ್ಯಾ.ನಿ ವಿಭಾಗದ ಸಿಬ್ಬಂದಿ | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಮರಗಳ ಟ್ರಿಂಮಿಂಗ್ ಮಾಡಿದ ತುಂಡುಗಳನ್ನು ತೆರವುಗೊಳಿಸಲಾಗುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಅನನ್ಯ ಆಸ್ಪತ್ರೆ ಹತ್ತಿರ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಸತೀಶ್ ಬೀದಿ ದೀಪ ಗುತ್ತಿಗೆದಾರರು | ವಾರ್ಡ್‌ನ ನೋಡೆಲ್ ಅಧಿಕಾರಿಗಳ ಬೀದಿ ದೀಪ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ ರಾಮಚಂದ್ರ 1ನೇ ಎನ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. | ವಾರ್ಡ್‌ನ ಸಮಿತಿ ಸಭೆಯಲ್ಲಿ ಕಳೆದ ಬಾರಿ ಮರಗಳ ಟ್ರಿಂಮಿಂಗ್ ಮಾಡಬೇಕೆಂದು ದೂರು ನೀಡಿದ್ದು ಮರಗಳ ಟ್ರಿಂಮಿಂಗ್ ಇನ್ನು ಆಗಿಲ್ಲವೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಅರಣ್ಯ ಇಲಾಖೆ (ಪ)ರವರು ಕ್ರಮವಹಿಸಲು ಸೂಚಿಸಿದರು. |
| ಶ್ರೀ ರಾಮಚಂದ್ರ 1ನೇ ಎನ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ ಕಲ್ವರ್ಟ್ ಮಾಡಲು ರಸ್ತೆಗಳನ್ನು ಮುಚ್ಚಿದ್ದು ವಾಹನ ಸವಾರರಿಗೆ ಹಾಗು ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ ಕಲ್ವರ್ಟ್ ಮಾಡುತ್ತಿರುವ ಗುತ್ತಿಗೆದಾರರಿಗೆ ತಾಂತ್ರಿಕವಾಗಿ ಶೀಘ್ರ ಕೆಲಸ ಮುಗಿಸಲು ತಿಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ ರಾಮಚಂದ್ರ 1ನೇ ಎನ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಗಣೇಶ ದೇವಾಲಯದ ಹಿಂಭಗದ ಆಟದ ಮೈದಾನದಲ್ಲಿ ಹಳೇ ಮುರಿದಿರುವ ಬೆಂಚ್‌ಗಳನ್ನು ತೆಗೆದು ಹೊಸ ಬೆಂಚಸ್‌ಗಳನ್ನು ಹಾಕಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಈಗಾಗಲೇ ಗಣೇಶ ದೇವಾಲಯದ ಹಿಂಭಗದ ಪಾರ್ಕ್ ಅಭಿವೃಧಿಗೊಳಿಸಲು ಹೊಸ ಕಾಮಗಾರಿಗಳ ಪಟ್ಟಿಗೆ ಸೇರಿಸಿಕೊಳ್ಳಲಾಗಿರುವುದಾಗಿ ಸಭೆಗೆ ಮಾಹಿತಿ ಕೊಟ್ಟರು |
| ಶ್ರೀಮತಿ. ಮಂಜುಳಾ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಕೇತಮಾರನಹಳ್ಳಿಯಲ್ಲಿ ನೀರಿನ ಪೈಪ್ ಒಡೆದು ನೀರು ಸೋರಿಕೆಯಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |



ವಿಶ್ವನಾಥ.ಪ

ಪು.ತಿ.ನೋ.

Scanned by CamScanner

| | |
|---|---|
| ಶ್ರೀ. ಸೋಮನಾಥ್<br>ಸಹಾಯಕ ಅಭಿಯಂತರರು<br>ಬೆಂ.ಜ.ಮಂ | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕ್ರಮ ವಹಿಸಲಾಗುವುದಾಗಿ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 19ನೇ ಸಿ, 19ನೇ ಡಿ, 19ನೇ ಇ ಮೈನ್‌ನಲ್ಲಿ ಕಸವನ್ನು ಪ್ರತಿನಿತ್ಯ ಗುಡಿಸುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀಮತಿ. ಮಂಜುಳಾ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಕೇತಮಾರನಹಳ್ಳಿಯಲ್ಲಿ ಕಸ ಕಸ ತೆಗೆಯುವ ವಾಹನದವರು ದೂರದಲ್ಲಿ ನಿಲ್ಲಿಸುತ್ತಿರುತ್ತಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಘ.ತ್ಯಾ.ನಿ ಪರೀವಿಕ್ಷಕರು ಕ್ರಮವಹಿಸಲು ಸೂಚಿಸಿದರು. |
| ಶ್ರೀ ರಾಮಚಂದ್ರ<br>1ನೇ ಎನ್ ಬ್ಲಾಕ್ ನಿವಾಸಿಗಳ<br>ಕ್ಷೇಮಾಭಿವೃಧಿ ಸಂಘ. | ವಾರ್ಡ್‌ನ ವಿದ್ಯಾವರ್ದಕ ಶಾಲೆ ಹತ್ತಿರ ಒಂದು ಕಡೆ ಪಾರ್ಕಿಂಗ್ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮಲೇಶ್ವರಂ ಸಂಚಾರಿ ಠಾಣೆಯವರಿಗೆ ಕ್ರಮವಹಿಸಲು ಸೂಚಿಸಿದರು. |

ಪ್ರತಿಯನ್ನು

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

04/10/21
ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್- 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

04/10/2021
ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್- 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪು.ತಿ.ನೋ.



Scanned by CamScanner